<u>ದಿನಾಂಕಃ**20-01-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಸಿ ವಿ ಎಸ್ ವಕೀಲರಿಂದಃ</u>

**1.** ನನಗೆ ಈಗ **19** ವರ್ಷ ವಯಸ್ಸಾಗಿರುತ್ತದೆ. ಅಪಘಾತ ಆಗುವ ಕಾಲಕ್ಕೆ ನನಗೆ **17** ವರ್ಷ ವಯಸ್ಸಿತ್ತು. ಆ ದಿನ ನಾನು ಎನ್ ಆರ್ ಪುರದ ಪೇಟೆಯಿಂದ ರಾಜೀವ್ ನಗರದ ಕಡೆಗೆ ಬೈಕನ್ನು ಚಲಾಯಿಸಿಕೊಂಡು ಹೋಗುತ್ತಿದ್ದೆನು. ಅಗ್ರಹಾರದ ಬಳಿ ಅಪಘಾತ ಆಗಿರುತ್ತದೆ. ನಾನು ಆ ದಿನ ಚಂದನ್ ಇವರಿಗೆ ಸಂಬಂಧಿಸಿದ ಬೈಕನ್ನು ಚಲಾಯಿಸಿಕೊಂಡು ಹೋಗಿರುತ್ತೇನೆ. ಅಪಘಾತದಿಂದ ಉಮೇಶ್ ಇವರು ತೀರಿಕೊಂಡಿರುವ ವಿಚಾರ ನನಗೆ ಗೊತ್ತಿರುತ್ತದೆ.

**2.** ಸಾಕ್ಷಿಗೆ ಈಗ ಒಂದು ಹೇಳಿಕೆಯ ಪ್ರತಿಯನ್ನು ತೋರೀಸಲಾಗಿ ನಾನು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ನೀಡಿದ ಹೇಳಿಕೆ ಇದ್ದು ಸಾಕ್ಷಿ ಸದರಿ ಹೇಳಿಕೆಯಲ್ಲಿ ತಾವು ಮಾಡಿದ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ **14** ಎಂದು , ಸಾಕ್ಷಿಯ ಸಹಿಯನ್ನು ನಿಪಿ **14** (ಎ) ಎಂದು ಗುರುತಿಸಲಾಯಿತು. ಅಪಘಾತದ ಕುರಿತು ನನ್ನನು ಚಿಕ್ಕಮಗಳೂರಿನ ಬಾಲ ನ್ಯಾಯ ಮಂಡಳಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ನನ್ನದು ತಪ್ಪಾಗಿರುತ್ತದೆ ಎಂದು ಹೇಳಿ ದಂಡ ಪಾವತಿ ಮಾಡಿರುತ್ತೇನೆ ಎಂದರೆ ಸರಿ . ನಾನು ಆ ದಿನ ಮೋಟಾರ್ ಸೈಕಲನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿದ ಕಾರಣ ಪರಿಹಾರ ಕೊಡಲು ಬಾದ್ಯಸ್ಥನು ಇರುತ್ತೇನೆ ಎಂದರೇ ಸರಿ .

<u>ಮರು ವಿಚಾರಣೆ ಃ ಇಲ್ಲ ಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿ ಃ